ಸಾಹಿತ್ಯ ಎಂದೂ ಕೇವಲ ರಾಷ್ಟ್ರೀಯ ಕಳಕಳಿಯ ವಿಚಾರ ಮಾತ್ರವೇ ಅಲ್ಲ. ಕೋಣೆಯಲ್ಲಿ ತನ್ನನ್ನು ಕೂಡಿಕೊಂಡು ತನ್ನೊಳಗಿನ ಯಾನಕ್ಕೆ ತೊಡಗುವ ಲೇಖಕ ವರ್ಷಗಳು ಕಳೆದ ಹಾಗೆ ಸಾಹಿತ್ಯದ ಮೊದಲನೆಯ ಶಾಶ್ವತ ನಿಯಮವನ್ನು ಕಂಡುಕೊಳ್ಳುತ್ತಾನೆ – ತನ್ನ ಕಥೆಗಳನ್ನು ಬೇರೆಯ ಜನರ ಕಥೆಗಳ ಹಾಗೆಯೂ ಬೇರೆಯ ಜನರ ಕಥೆಗಳನ್ನು ತನ್ನ ಸ್ವಂತದ ಕಥೆಯ ಹಾಗೆಯೂ ಹೇಳುವ ಕಲಾವಂತಿಕೆಯನ್ನು ಪಡೆಯಬೇಕು. ಸಾಹಿತ್ಯವೆಂದರೆ ಇದೇ. ಮೊದಲಿಗೆ ನಾವು ಬೇರೆಯ ಜನರ ಕಥೆ, ಪುಸ್ತಕಗಳ ಯಾನವನ್ನೂ ಮಾಡಬೇಕು.

ನಮ್ಮಪ್ಪನ ಲೈಬ್ರರಿ ಚೆನ್ನಾಗಿತ್ತು. ಸಾವಿರದ ಐನೂರು ಪುಸ್ತಕಗಳಿದ್ದವು. ಒಳ್ಳೆಯ ಲೇಖಕನಿಗೆ ಅಷ್ಟು ಪುಸ್ತಕ ಬೇಕಾದಷ್ಟಾಯಿತು. ನನ್ನ ಇಪ್ಪತ್ತೆರಡನೆಯ ವಯಸ್ಸಿನ ಹೊತ್ತಿಗೆ ಅವೆಲ್ಲವನ್ನೂ ಓದಿರದಿದ್ದರೂ ಒಂದೊಂದೂ ಪುಸ್ತಕದ ಪರಿಚಯ ಚೆನ್ನಾಗಿತ್ತು. ಯಾವ ಪುಸ್ತಕ ಮುಖ್ಯ, ಯಾವುದು ಓದುವುದಕ್ಕೆ ಸುಲಭ, ಯಾವುದು ಕ್ಲಾಸಿಕ್, ಯಾವುದು ತೀರ ಅನಿವಾರ್ಯ, ಸ್ಥಳೀಯ ಚರಿತ್ರೆಯ ಮನರಂಜಕ ಕಥೆಗಳನ್ನು ಹೇಳುವ, ಆದರೆ ಮರೆಯಬಹುದಾದ ಪುಸ್ತಕ ಯಾವುದು, ನಮ್ಮಪ್ಪ ತೀರ ಗೌರವಿಸುವ ಫ್ರೆಂಚ್ ಲೇಖಕರ ಪುಸ್ತಕ ಯಾವುದು ಎಲ್ಲಾ ಗೊತ್ತಾಗುತ್ತಿತ್ತು. ಒಂದೊಂದು ಸಾರಿ ಲೈಬ್ರರಿಯನ್ನು ದೂರದಿಂದ ನೋಡುತ್ತಾ ಬೇರೆ ಇನ್ನೊಂದು ಮನೆಯಲ್ಲಿ, ಇನ್ನೊಂದು ಲೈಬ್ರರಿ, ಇದಕ್ಕಿಂತ ಉತ್ತಮವೂ ಆದದ್ದನ್ನು ನನಗಾಗಿ ಮಾಡಿಕೊಳ್ಳುವ ಕನಸು ಕಾಣುತ್ತಿದ್ದೆ. ನಮ್ಮಪ್ಪನ ಲೈಬ್ರರಿಯನ್ನು ದೂರದಿಂದ ನೋಡಿದಾಗ ಅದು ನಿಜ ಜಗತ್ತಿನ ಪುಟ್ಟ ಚಿತ್ರದ ಹಾಗೆ ಕಾಣುತ್ತಿತ್ತು. ಆದರೆ ಇದು ನಮ್ಮದೇ ಮೂಲೆಯಿಂದ, ಇಸ್ತಾಂಬುಲ್‌ನಿಂದ ಕಂಡ ಜಗತ್ತು. ನಮ್ಮಪ್ಪ ವಿದೇಶಕ್ಕೆ ಹೋದಾಗ ಪ್ಯಾರಿಸ್ಸು, ಅಮೆರಿಕದಿಂದ ತಂದ ಪುಸ್ತಕಗಳಿಂದ ಲೈಬ್ರರಿ ಮಾಡಿಕೊಂಡಿದ್ದರು. ಜೊತೆಗೇ 40 ಮತ್ತು 50ರ ದಶಕಗಳಲ್ಲಿ ವಿದೇಶದ ಹಳೆಯ, ಹೊಸ ಪುಸ್ತಕ ಮಾರುತ್ತಿದ್ದ ಇಸ್ತಾಂಬುಲ್ ಅಂಗಡಿಗಳಿಂದ ಖರೀದಿಸಿದವೂ ಇದ್ದವು. ಆ ಅಂಗಡಿಯವರು ನನಗೂ ಗೊತ್ತಿದ್ದರು. ನನ್ನ ಜಗತ್ತು ಅನ್ನುವುದು ಸ್ಥಳೀಯ ರಾಷ್ಟ್ರೀಯ ಮತ್ತು ಪಾಶ್ಚಾತ್ಯದ ಮಿಶ್ರಣವಾಗಿತ್ತು. ನಾನು 70ರ ದಶಕದಲ್ಲಿ ಮಹತ್ವಾಕಾಂಕ್ಷೆಯಿಂದಲೇ ನನ್ನ ಲೈಬ್ರರಿ ಕಟ್ಟಿಕೊಳ್ಳುವುದಕ್ಕೆ ಶುರು ಮಾಡಿದೆ. ಇಸ್ತಾಂಬುಲ್‌ನಲ್ಲಿದ್ದ ನಾನು ಲೇಖಕನಾಗಲು ಇನ್ನೂ ನಿರ್ಧಾರ ಮಾಡಿರಲಿಲ್ಲ. ಚಿತ್ರಕಾರನಾಗುವುದಕ್ಕೂ ಒಲ್ಲೆ ಅನ್ನಿಸಿತ್ತು. ನನ್ನ ಬದುಕಿನ ದಾರಿ ಯಾವುದು ಅನ್ನುವುದು ಖಚಿತವಾಗಿರಲಿಲ್ಲ. ಓದು ಬರಹಗಳ ಕಾರಣದಿಂದ ಹುಟ್ಟಿಕೊಂಡ ಆಸೆ ಇತ್ತು, ತಣಿಯದ ಕುತೂಹಲವಿತ್ತು. ಹಾಗೆಯೇ ನನ್ನ ಬದುಕಿನಲ್ಲಿ ಏನೋ ಕೊರತೆ ಇದೆ, ಮಿಕ್ಕವರ ಹಾಗೆ ನಾನು ಬದುಕಲಾರೆ ಅನ್ನಿಸುತ್ತಿತ್ತು. ನಮ್ಮಪ್ಪನ ಲೈಬ್ರರಿ ಕಂಡಾಗ ಮನಸ್ಸಿನಲ್ಲಿ ಹುಟ್ಟುತ್ತಿದ್ದ ಭಾವನೆಗೂ ಇದಕ್ಕೂ ಸಂಬಂಧವಿದೆ. ನಮ್ಮಪ್ಪನ ಲೈಬ್ರರಿಗೆ ಹೋದಾಗಲೆಲ್ಲ ನಾನು ಲೋಕದ ಸಂಗತಿಗಳ ಕೇಂದ್ರದಿಂದ ದೂರದಲ್ಲಿದ್ದೇನೆ ಅನ್ನಿಸುತ್ತಿತ್ತು. ಆ ದಿನಗಳಲ್ಲಿ ಇಸ್ತಾಂಬುಲ್‌ನಲ್ಲಿದ್ದ ನಮಗೆಲ್ಲ ಅಂಥ ಭಾವನೆ ಹುಟ್ಟುತಿತ್ತು. ನಾವೆಲ್ಲ ಯಾವುದೋ ಹಳ್ಳಿಗಾಡಿನಲ್ಲಿದ್ದೇವೆ ಅನ್ನಿಸುತ್ತಿತ್ತು. ನಾನು ಇರುವ ದೇಶದಲ್ಲಿ ಕಲಾವಿದ, ಲೇಖಕ, ಚಿತ್ರಕಾರರ ಬಗ್ಗೆ ಕುತೂಹಲ ಕಿಂಚಿತ್ತೂ ಇಲ್ಲ, ಇಂಥವರಿಗೆ ಬದುಕಿನ ಭರವಸೆಯೂ ಇಲ್ಲ ಅನ್ನುವುದು ನನಗೆ ಚೆನ್ನಾಗಿಯೇ ಗೊತ್ತಿತ್ತು. ನನ್ನ ಕಳವಳಕ್ಕೆ, ನನ್ನ ಬದುಕಿನಲ್ಲಿ ಏನೋ ಕೊರತೆ ಅನ್ನಿಸುವುದಕ್ಕೆ ಇದೂ ಕಾರಣ. ಎಪ್ಪತ್ತರ ದಶಕದಲ್ಲಿ ನಮ್ಮಪ್ಪ ಕೊಟ್ಟ ಹಣವನ್ನು ಪಡೆದುಕೊಂಡು ಆಸೆಬುರುಕನ ಹಾಗೆ ಹೋಗಿ, ಮಾಸಿದ, ದೂಳು ಹಿಡಿದ, ನಾಯಿಕಿವಿಯ ಹಾಗೆ ಜೋಲುತ್ತಿದ್ದ ಪುಟಗಳಿದ್ದ ಪುಸ್ತಕಗಳನ್ನು ಹಳೆಯ ಪುಸ್ತಕಗಳ ಅಂಗಡಿಯಲ್ಲಿ ಖರೀದಿ ಮಾಡುತ್ತಿದ್ದೆ. ಸೆಕೆಂಡ್ ಹ್ಯಾಂಡ್ ಪುಸ್ತಕದ ಅಂಗಡಿಗಳು